**ದಿನಾಂಕ:25-02-2022 ರಂದು ಸಾಕ್ಷಿಧಾರರನ್ನು ಕರೆಸಿ ಪ್ರಮಾಣ ವಚನ ಬೋಧಿಸಲಾಯಿತು.**

**ಮುಂದುವರೆದ ಮುಖ್ಯ ವಿಚಾರಣೆ: ವಾದಿ ಪರ ಶ್ರೀ.ಎಸ್.ಡಿ.ಎಂ ವಕೀಲರಿಂದ**

ನಾನು ಈ ದಾವೆಯಲ್ಲಿ ವಾದಿಯಾಗಿದ್ದೇನೆ. ನನ್ನ ಮುಖ್ಯ ವಿಚಾರಣೆಯ ಸಾಕ್ಷಿಯನ್ನು ಪ್ರಮಾಣ ಪತ್ರದ ಮೂಲಕ ಸಲ್ಲಿಸಿರುತ್ತೇನೆ . ಅದರಲ್ಲಿನ ಸಂಗತಿಗಳೆಲ್ಲ ಸತ್ಯವಿದ್ದು, ಅವುಗಳನ್ನು ನಾನೇ ಹೇಳಿ ಬರೆಯಿಸಿರುತ್ತೇನೆ. ಪ್ರಮಾಣ ಪತ್ರವನ್ನು ನನ್ನ ಮುಖ್ಯ ವಿಚಾರಣೆಯ ಸಾಕ್ಷ್ಯವನ್ನಾಗಿ ಪರಿಗಣಿಸಬೇಕೆಂದು ಪ್ರಾರ್ಥಿಸುತ್ತೇನೆ.

ದಾವಾ ಆಸ್ತಿಗೆ ಸಂಬಂಧಿಸಿದ ಪಹಣಿಯನ್ನು ನಿ.ಪಿ.1 ಎಂದು, ದಾವಾ ಆಸ್ತಿಗೆ ಸಂಬಂಧಿಸಿದಂತೆ ದಿಃ 15-10-2015 ರಂದು ನನ್ನ ಮತ್ತು 1 ನೇ ಪ್ರತಿವಾದಿಯ ಮಧ್ಯೆ ಆದ ನೋಂದಾಯಿತ ಬಿನ್ ಕಬ್ಜಾ ಜಮೀನಿನ ಖರೀದಿ ಕರಾರು ಪತ್ರವನ್ನು ನಿ.ಪಿ.2 ಎಂದು ಗುರುತಿಸಲಾಯಿತು. ಸದರಿ ದಾಖಲೆಗೆ 1 ನೇ ಪ್ರತಿವಾದಿಯು ಖರೀದಿ ಕರಾರು ಪತ್ರ ಬರೆದುಕೊಟ್ಟವರಾಗಿ ಸಹಿ ಹಾಕಿದ್ದು, ನಾನು ಖರೀದಿ ಕರಾರು ಪತ್ರ ಬರೆಸಿಕೊಂಡವನಾಗಿ ಸಹಿ ಹಾಕಿರುತ್ತೇನೆ. ಸಾಕ್ಷಿಯು ನಿ.ಪಿ.2 ರ ದಾಖಲೆಯಲ್ಲಿ ತನ್ನ ಹಾಗೂ 1 ನೇ ಪ್ರತಿವಾದಿಯ ಸಹಿಗಳನ್ನು ಗುರುತಿಸಿದ್ದು, ಸಾಕ್ಷಿಯ ಸಹಿಗಳನ್ನು ಒಟ್ಟಾಗಿ ನಿ.ಪಿ.2(ಎ) ಎಂದು, 1 ನೇ ಪ್ರತಿವಾದಿಯ ಸಹಿಗಳನ್ನು ಒಟ್ಟಾಗಿ ನಿ ಪಿ 2(ಬಿ) ಎಂದು ಗುರುತಿಸಲಾಯಿತು. ಸದರಿ ದಾಖಲೆಗೆ 2 ರಿಂದ 4 ನೇ ಪ್ರತಿವಾದಿಯರು ಸಮ್ಮತಿ ಸಾಕ್ಷಿಗಳಾಗಿ ಸಹಿ ಹಾಕಿದ್ದಾರೆ. ಸಾಕ್ಷಿಯು ನಿ ಪಿ 2 ರಲ್ಲಿ 2 ರಿಂದ 4 ನೇ ಪ್ರತಿವಾದಿಯರ ಸಹಿಗಳನ್ನು ಗುರುತಿಸಿದ್ದು, ಅವುಗಳನ್ನು ಕ್ರಮವಾಗಿ ನಿ ಪಿ 2(ಸಿ) ಯಿಂದ ನಿ ಪಿ 2(ಇ) ಎಂದು ಗುರುತಿಸಲಾಯಿತು. ನಿ ಪಿ 2 ರ ದಾಖಲೆಗೆ ರಾಘವೇಂದ್ರ ಕಠಾರಿ ಮತ್ತು ತಿರಕನಗೌಡ ಕರಲೇಗೌಡ್ರ ರವರು ಸಾಕ್ಷಿದಾರರಾಗಿ ಸಹಿ ಹಾಕಿದ್ದಾರೆ. ಸಾಕ್ಷಿಯು ನಿ ಪಿ 2 ರಲ್ಲಿ ಇಬ್ಬರೂ ಸಾಕ್ಷಿದಾರರ ಸಹಿಗಳನ್ನು ಗುರುತಿಸಿದ್ದು, ಅವುಗಳನ್ನು ಕ್ರಮವಾಗಿ ನಿ.ಪಿ.2(ಎಫ್ ಮತ್ತು ಜಿ ) ಎಂದು ಗುರುತಿಸಲಾಯಿತು. ನಿ.ಪಿ.2 ಅನ್ನು ಕೆ.ಎಸ್ ಕುಲಕರ್ಣಿ ಎಂಬ ಜಿಲ್ಲಾ ದಸ್ತಾವೇಜು ಬರಹಗಾರರು ಬರೆದಿದ್ದು, ಸಾಕ್ಷಿಯು ನಿ.ಪಿ.2 ರಲ್ಲಿ ಅವರ ಸಹಿಯನ್ನು ಗುರುತಿಸಿದ್ದು, ಸದರಿ ಸಹಿಯನ್ನು ನಿ ಪಿ 2(ಹೆಚ್) ಎಂದು ಗುರುತಿಸಲಾಯಿತು. ನಿ ಪಿ 2 ರ ಪುಟ ಸಂಖ್ಯೆ 2 ರ ಹಿಂಭಾಗದಲ್ಲಿ ನನ್ನ ಎರಡು ಭಾವಚಿತ್ರಗಳು, ಅವುಗಳ ಮುಂದೆ ನನ್ನ ಹೆಬ್ಬೆಟ್ಟಿನ ಗುರುತುಗಳು ಮತ್ತು ನನ್ನ ಸಹಿಗಳು ಹಾಗೂ 1 ನೇ ಪ್ರತಿವಾದಿಯ ಒಂದು ಭಾವಚಿತ್ರ, ಅದರ

ಮುಂಭಾಗದಲ್ಲಿ 1 ನೇ ಪ್ರತಿವಾದಿಯ ಹೆಬ್ಬೆಟ್ಟಿನ ಗುರುತು ಹಾಗೂ 1 ನೇ ಪ್ರತಿವಾದಿಯ ಸಹಿ ಇದೆ. ಸಾಕ್ಷಿಯ ಭಾವಚಿತ್ರಗಳನ್ನು ಒಟ್ಟಾಗಿ ನಿ ಪಿ 2(ಐ) ಎಂದು ಹಾಗೂ ಸಾಕ್ಷಿಯ ಸಹಿಗಳನ್ನು ಒಟ್ಟಾಗಿ ನಿ ಪಿ 2(ಜೆ) ಎಂದು, 1 ನೇ ಪ್ರತಿವಾದಿಯ ಭಾವಚಿತ್ರವನ್ನು ನಿ ಪಿ 2(ಕೆ) ಎಂದು, ಅದರ ಮುಂಭಾಗದಲ್ಲಿರುವ 1 ನೇ ಪ್ರತಿವಾದಿಯ ಸಹಿಯನ್ನು ನಿ.ಪಿ.2(ಎಲ್) ಎಂದು ಗುರುತಿಸಲಾಯಿತು. ನಿ.ಪಿ.2 ರ ಪುಟ ಸಂಖ್ಯೆ3 ರ ಹಿಂಭಾಗದಲ್ಲಿ 2 ರಿಂದ 4 ನೇ ಪ್ರತಿವಾದಿಯರ ಭಾವಚಿತ್ರಗಳು ಅದರ ಮುಂಭಾಗದಲ್ಲಿ ಅವರ ಹೆಬ್ಬೆಟ್ಟಿನ ಗುರುತು ಮತ್ತು ಸಹಿಗಳು ಇವೆ ಸದರಿ ಭಾವಚಿತ್ರಗಳನ್ನು ಕ್ರಮವಾಗಿ ನಿಪಿ.2(ಎಂ ಯಿಂದ ಓ) ಎಂದು, ಅದರ ಮುಂಭಾಗದಲ್ಲಿರುವ ಅವರ ಸಹಿಗಳನ್ನು ನಿ ಪಿ 2(ಪಿ ಯಿಂದ ಆರ್) ಎಂದು ಗುರುತಿಸಲಾಯಿತು. ದಾವಾ ಆಸ್ತಿಗೆ ಸಂಬಂಧಪಟ್ಟಂತೆ ಎಂ ಇ ನಂ.785 ರ ದೃಢಿಕೃತ ನಕಲನ್ನು ನಿ.ಪಿ.3 ಎಂದು, 1 ನೇ ಪ್ರತಿವಾದಿಗೆ ನನ್ನ ವಕೀಲರ ಮೂಲಕ ನೀಡಿದ ನೋಟೀಸಿನ ಕಚೇರಿ ಪ್ರತಿಯನ್ನು ನಿ ಪಿ 4 ಎಂದು, ಅದನ್ನು ಕಳುಹಿಸಿದ ಬಗ್ಗೆ ಅಂಚೆ ರಶೀದಿಯನ್ನು ನಿ ಪಿ 5 ಎಂದು, ಸದರಿ ನೋಟೀಸು 1 ನೇ ಪ್ರತಿವಾದಿಗೆ ಜಾರಿಯಾದ ಬಗ್ಗೆ ಅಂಚೆ ಸ್ವೀಕೃತಿ ಪತ್ರವನ್ನು ನಿ ಪಿ6 ಎಂದು, ಸದರಿ ನೋಟೀಸಿಗೆ 1 ನೇ ಪ್ರತಿವಾದಿ ನೀಡಿದ ಉತ್ತರದ ನೋಟೀಸನ್ನು ನಿ ಪಿ 7 ಎಂದು, ಸದರಿ ನೋಟೀಸಿನ ಬಾಬತ್ತು ಅಂಚೆ ಕವರ್ ಅನ್ನು ನಿ ಪಿ 8 ಎಂದು ಗುರುತಿಸಲಾಯಿತು.

**(ವಾದಿ ಪರ ವಕೀಲರು ಮುಂದುವರೆದ ಮುಖ್ಯ ವಿಚಾರಣೆಗೆ ಸಮಯ ಕೋರಿದ್ದರಿಂದ ಮುಂದೂಡಲಾಯಿತು)**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದ ಮೇರೆಗೆ ಬೆರಳಚ್ಚು ಮಾಡಲಾಯಿತು)

ನ. ಸ. ಓ. ಹೇ. ಕೆ ಸರಿ ಇದೆ
ಎಂದು ಒಪ್ಪಿರುತ್ತಾರೆ.

ಹೆಚ್ಚುವರಿ ಹಿರಿಯ ಸಿವಿಲ್ ನ್ಯಾಯಾಧೀಶರು

ಸಾಕ್ಷಿದಾರರ ಸಹಿ ಹಾನಗಲ್